ಸಿಸಿ ನಂಃ 2028/2025
ಸಿ.ಡಬ್ಲೂ 1/ಪಿ.ಡಬ್ಲೂ 1

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 2028/2025**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರಾಘವೇಂದ್ರ ವಡ್ಡಿ |
| ತಂದೆಯ ಹೆಸರು | ಃ | ನಾಗರಾಜ |
| ವಯಸ್ಸು | ಃ | 35 ವರ್ಷ |
| ಉದ್ಯೋಗ | ಃ | ಕಲಾವಿದ |
| ವಾಸ ಸ್ಥಳ | ಃ | ಹುಬ್ಬಳ್ಳಿ. |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **27-03-2026**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಅಪಘಾತದಲ್ಲಿ ಮರಣ ಹೊಂದಿದ ಶ್ರೀಧರ ನನ್ನ ಮಾವನಿರುತ್ತಾನೆ. ದಿನಾಂಕಃ 29-05-2025 ರಂದು ನಾನು ಹುಬ್ಬಳ್ಳಿಯಲ್ಲಿರುವಾಗ ಅಂದಾಜು ರಾತ್ರಿ 10.30 ಕ್ಕೆ ನನ್ನ ಮಾವನವರ ಪೋನಿನಿಂದ ಒಂದು ದೂರವಾಣಿ ಕರೆ ಬಂತು, ಕರೆ ಮಾಡಿದ ವ್ಯಕ್ತಿಯು ಧಾರವಾಡದ ಮಣಿಕಂಠ ನಗರದ ತಾಯಮ್ಮನವರ ಕಲ್ಯಾಣ ಮಂಟಪ ಹತ್ತಿರ ಅಪಘಾತವಾಗಿರುವುದಾಗಿ ಮತ್ತು ಗಾಯಾಳುವನ್ನು ಧಾರವಾಡದ ಸಿವಿಲ್ ಆಸ್ಪತ್ರೆಗೆ ದಾಖಲು ಮಾಡಿ ನಂತರ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ಹೇಳಿದರು. ಸುದ್ದಿ ತಿಳಿದು ನಾನು ಸಹ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಹೋದೆನು. ಅಲ್ಲಿ ನೋಡಲಾಗಿ ನನ್ನ ಮಾವನವರ ತಲೆಗೆ ಮತ್ತು ಕಾಲಿಗೆ ಪೆಟ್ಟಾಗಿತ್ತು. ನನ್ನ ಮಾವನವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಅಲ್ಲಿನ ವೈದ್ಯರು ತೀವ್ರನಿಗಾ ಘಟಕಕ್ಕೆ ದಾಖಲಿಸಿದರು. ಸದರಿ ಅಪಘಾತವು ನನ್ನ ಮಾವನವರು ರಾತ್ರಿ ಊಟದ ಬಳಿಕ ಮನೆಯ ಮುಂದೆ ವಾಕ್ ಮಾಡುತ್ತಿರುವಾಗ ಒಂದು ಮೊಟರ ಸೈಕಲ ಅದರ ಸವಾರ ಅತೀ ವೇಗವಾಗಿ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಡಿಕ್ಕಿ ಪಡಿಸಿದರು ಎಂದು ಚಾಸಾ-8 ರವರು ಹೇಳಿದರು. ದಿನಾಂಕಃ 30-05-2025 ರಂದು ನಾನು ಈ ಕುರಿತು ದೂರು ಕೊಟ್ಟೆನು. ಸಾಕ್ಷಿ

ಸಿಸಿ ನಂಃ 2028/2025
ಸಿ.ಡಬ್ಲೂ 1/ಪಿ.ಡಬ್ಲೂ 1

ಗುರುತಿಸಿದ ದೂರನ್ನು ನಿಪಿ.1 ಎಂದು, ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನಂತರ ಚಿಕಿತ್ಸೆ ಫಲಕಾರಿಯಾಗದೇ ನನ್ನ ಮಾವ ದಿನಾಂಕಃ 16-07-2025 ರಂದು ದವಾಖಾನೆಯಲ್ಲಿ ಮರಣ ಹೊಂದಿದರು. ಈ ಕುರಿತು ಮರು ಹೇಳಿಕೆ ನೀಡಿದ್ದೇನೆ.

ದಿನಾಂಕಃ 23-08-2025 ರಂದು ಪೋಲಿಸರು ನನ್ನನ್ನು ಠಾಣೆಗೆ ಕರೆಯಿಸಿ ಅಪಘಾತಕ್ಕೆ ಕಾರಣವಾದ ವಾಹನ ಮತ್ತು ಅದರ ಸವಾರ/ಆರೋಪಿಯನ್ನು ತೋರಿಸಿದರು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ದಿನಾಂಕಃ 29-05-2025 ರಂದು ರಾತ್ರಿ ನನ್ನ ಮಾವ ದೂರವಾಣಿಯಲ್ಲಿ ಸಂಪರ್ಕಿಸಿ ಅಪಘಾತದ ಕುರಿತು ಮಾಹಿತಿ ನೀಡಿದರು ಎಂದರೆ ಸರಿ. ನಾನು ಸಹ ಕಿಮ್ಸ ಆಸ್ಪತ್ರೆಗೆ ಹೋದಾಗ ಅಲ್ಲಿ ನಮ್ಮ ಮಾವನವರನ್ನು ಚಿಕಿತ್ಸೆಗೆ ತಂದಿದ್ದು ಅಲ್ಲಿ ವಿಚಾರಿಸಿದಾಗ ನಾನು ರಸ್ತೆಯ ಬದಿಯಲ್ಲಿ ವಾಕ್ ಮಾಡುತ್ತಿರುವಾಗ ಒಬ್ಬ ಮೊಟರ ಸೈಕಲ ಸವಾರನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ತನಗೆ ಅಪಘಾತ ಮಾಡಿರುವುದಾಗಿ ಹೇಳಿದನು ಎಂದರೆ ಸರಿ. ಮುಂದುವರೆದು ನನ್ನ ಮಾವನವರು ಅಲ್ಲಿ ಸೇರಿದ ಜನ ತನ್ನನ್ನು ರಸ್ತೆ ಬದಿಯಲ್ಲಿ ಕೂರಿಸಿದರು, ಅಪಘಾತ ಪಡಿಸಿದ ವ್ಯಕ್ತಿಯು ಅಲ್ಲಿ ಜನ ಸೇರುವುದನ್ನು ನೋಡಿ ವಾಹನ ಸಮೇತ ಪರಾರಿಯಾಗಿರುವುದಾಗಿ ಹೇಳಿದನು ಎಂದರೆ ಸರಿ. ಗಡಿಬಿಡಿಯಲ್ಲಿ ಸದರಿ ಮೊಟರ ಸೈಕಲ ನೋಂದಣಿ ಸಂಖ್ಯೆ ಗಮನಿಸಲಿಲ್ಲ ಮತ್ತು ಹಾಗೂ ಅದರ ಚಾಲಕನ ಹೆಸರನ್ನು ತಿಳಿದುಕೊಳ್ಳಲಿಲ್ಲ ಎಂದು ನನಗೆ ಹೇಳಿದರು ಎಂದರೆ ಸರಿ. ಸದರಿ ಅಪಘಾತ ರಾತ್ರಿ 10.15 ಕ್ಕೆ ಆಗಿರುವುದಾಗಿ ಹೇಳಿದರು ಎಂದರೆ ಸರಿ. ದಿನಾಂಕಃ 15-07-2025 ರಂದು ನನ್ನ ಮಾವನವರು

ಮರಣ ಹೊಂದಿದ್ದು ಈ ಕುರಿತು ದಿನಾಂಕಃ 16-07-2025 ರಂದು ಮರು ಹೇಳಿಕೆ ನೀಡಿದ್ದೆನೆ ಎಂದರೆ ಸರಿ. ದಿನಾಂಕಃ 23-07-2025 ರಂದು ಪೋಲಿಸರು ನನ್ನನ್ನು ಠಾಣೆಗೆ ಕರೆಯಿಸಿ ಒಂದು ಮೊಟರ ಸೈಕಲ ನಂ.ಕೆಎ 25/ಇಎಕ್ಸ-2094 ಅನ್ನು ತೋರಿಸಿದರು ಎಂದರೆ ಸರಿ. ಅದೇ ಸಮಯಕ್ಕೆ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿದ ರೋಹಿತ ಶಿಂಧೆ, ಗೋಪಾಲ ಮಾದಾರ ಹಾಗೂ ರಮೇಶ ಹೆಬಸೂರ ಇವರನ್ನು ಸಹ ಪೋಲಿಸರು ಠಾಣೆಗೆ ಕರೆಯಿಸಿ ವಾಹನ ತೋರಿಸಿದಾಗ ಅವರು ಸಹ ವಾಹನ ಗುರುತಿಸಿದರು ಎಂದರೆ ಸರಿ. ಈ ಕುರಿತು ಅದೇ ದಿನ ನಾನು ಮರು ಹೇಳಿಕೆ ನೀಡಿದ್ದೆನೆ ಎಂದರೆ ಸರಿ. ದಿನಾಂಕಃ 29-07-2025 ರಂದು ಪೋಲಿಸರು ನನ್ನನ್ನು ಠಾಣೆಗೆ ಕರೆಯಿಸಿ ಒಬ್ಬ ವ್ಯಕ್ತಿಯನ್ನು ತೋರಿಸಿದರು ಎಂದರೆ ಸರಿ. ಅದೇ ವೇಳೆಗೆ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿದ ರೋಹಿತ ಶಿಂಧೆ, ಗೋಪಾಲ ಮಾದಾರ ಹಾಗೂ ರಮೇಶ ಹೆಬಸೂರ ಇವರನ್ನು ಸಹ ಠಾಣೆಗೆ ಕರೆಯಿಸಿ ಸದರಿ ಮೊಟರ ಸೈಕಲ ಚಾಲಕನನ್ನು ತೋರಿಸಿ ಅವರು ಸಹ ಗುರುತಿಸಿದರು ಎಂದರೆ ಸರಿ. ಆ ಸಮಯಕ್ಕೆ ಸದರಿ ವ್ಯಕ್ತಿಯ ಹೆಸರು ಮೆಹಬೂಬ ಅಲಿ ಅಲಿಯಾಸ ಮೆಹಬೂಬ ಸೈಯದ ಎಂದು ತಿಳಿಯಿತು ಎಂದರೆ ಸರಿ. ಈ ಕುರಿತು ಸಹ ನಾನು ಮರುಹೇಳಿಕೆ ನೀಡಿದ್ದೆನೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಎಮ್ ಜಿ ಆರ್ ವಕೀಲರಿಂದ**

ನನ್ನ ಮಾವನವರಿಗೆ ಉಲ್ಲೇಖಿತ ಅಪಘಾತವಾಗುವ ಮೊದಲು ಒಂದು ಅಪಘಾತವಾಗಿತ್ತು ಎಂದರೆ ಸರಿಯಲ್ಲ. ನನ್ನ ಮಾವನವರ ಎಡಗಾಲಿಗೆ ಪ್ರ್ಯಾಕ್ಚರ ಆಗಿ ಪ್ಲಾಸ್ಟರ ಹಾಕಿ ನಡೆಯಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಾವನರಿಗೆ ಈ ಹಿಂದೆ ಘಟಿಸಿದ ಅಪಘಾತದ ಪರಿಣಾಮ ಎಡಕಾಲಿಗೆ ಪ್ರ್ಯಾಕ್ಚರ ಆಗಿ ಸರಿಯಾಗಿ ನಡೆಯಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಾವನವರು ರಸ್ತೆ ಬದಿಯ ಪಾದಚಾರಿಯ ಮಾರ್ಗದಲ್ಲಿ ವಾಕ್ ಮಾಡುತ್ತಿದ್ದರು. ನನ್ನ ಮಾವನವರಿಗೆ ಆರೋಗ್ಯ ಸರಿಯಿಲ್ಲದ ಕಾರಣ ತಲೆಗೆ ಚಕ್ರ ಬಂದು ಬಿದ್ದು ಪೆಟ್ಟು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಅಪಘಾತ ಸಂಭವಿಸಿಲ್ಲ ಪರಿಹಾರ ಪಡೆಯುವ ಉದ್ದೇಶದಿಂದ ಅಪಘಾತವಾಗಿರುವುದಾಗಿ ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ತನಿಖಾಧಿಕಾರಿಯ ಮುಂದೆ ಮರುಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ಮರಣ ಹೊಂದಿದ ವ್ಯಕ್ತಿ ನನ್ನ ಮಾವನಾಗಿರುವ ಕಾರಣ ಅವರ ಕುಟುಂಬದ ಸದಸ್ಯರಿಗೆ ಪರಿಹಾರ ಸಿಗಲಿ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

ಪ್ರ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.